ಬೈಲಹೊಂಗಲ ತಾಲ್ಲೂಕಿನ ತಿಗಡೊಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘ ಮತ್ತು ಮ್ಯಾಕುಲಮರಡಿ ವ್ಯವಸಾಯ ಸೇವಾ ಸಹಕಾರ ಸಂಘಗಳ ಬಗ್ಗೆ

೪೪೨. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ಸುಸ್ತಿ ಬಾಕಿ ಇಲ್ಲದ ಹಾಗೂ ಸಮರ್ಪಕ ಕಾರ್ಯವೆಸಗುತ್ತಿರುವ ತಿಗಡೊಳ್ಳಿ ವ್ಯವಸಾಯ ಸೇವಾ ಸಹಕಾರಿ ಸಂಘದ ಆಡಳಿತ ಮಂಡಲಿಯನ್ನು ವಿಸರ್ಜಿಸಲು ಹಾಗೂ ಮ್ಯಾಕಲಮರಡಿ ವ್ಯವಸಾಯ ಸೇವಾ ಸಹಕಾರಿ ಸಂಘದ ಕಾರ್ಯದರ್ಶಿಯನ್ನು ವಜಾಗೊಳಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಆ) ಜಿಲ್ಲೆಯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಚುನಾವಣೆಗೆ ಸ್ಪರ್ಧಿಸಿದ ಉಮೇದ್ವಾರರೊಬ್ಬರಿನ ನೆರವಿತ್ತ ಬಗ್ಗೆ ಈ ಕ್ರಮ ತೆಗೆದುಕೊಂಡಿರುವುದು ನಿಜವೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಈ ಸಹಕಾರಿ ಸಂಘವು ಸಹಕಾರಿ ಸಂಘಗಳ ಕಾಯಿದೆ, ನಿಯಮ ಅಥವಾ ಬೈಲಾಗಳ ಪ್ರಕಾರ ಕಾರ್ಯವೆಸಗಿಲ್ಲವೆಂದು ಮತ್ತು ಕಾರ್ಯಕಾರಿ ಸಮಿತಿಯು ತನ್ನ ಕಾರ್ಯಗಳಲ್ಲಿ ಕರ್ತವ್ಯ ವಿಮುಖರಾಗಿರುವುದನ್ನು ಮನಗಂಡು ಸಹಕಾರ ಸಂಘಗಳ ಉಪ ನಿಬಂಧಕರು ಸಂಘದ ಆಡಳಿತ ಮಂಡಲಿಯನ್ನು ರದ್ದು ಪಡಿಸಿರುತ್ತಾರೆ. ಆದಾಗ್ಯೂ ರದ್ದುಪಡಿಸಿದ ಆದೇಶಕ್ಕೆ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಬೆಳಗಾಂ ೫-೧೨-೮೫ ರಂದು ತಡೆಯಾಜ್ಞೆ ನೀಡಿರುತ್ತಾರೆ.

ಮ್ಯಾಕಲಮರಡಿ ವ್ಯವಸಾಯ ಸೇವಾ ಸಹಕಾರ ಸಂಘದ ಕಾರ್ಯದರ್ಶಿಯವರನ್ನು ವಜಾ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇಲ್ಲ ಮ್ಯಾಕಲಮರಡಿ ವ್ಯವಸಾಯ ಸೇವಾ ಸಹಕಾರ ಸಂಘದ ಕಾರ್ಯದರ್ಶಿಯವರನ್ನು ಹಣ ದುರುಪಯೋಗ ಮತ್ತು ಇತರೆ ಅಕ್ರಮಗಳಿಗಾಗಿ ವಜಾ ಮಾಡಲಾಗಿದೆ.

ಭಾಗ್ಯಜ್ಯೋತಿ ಫಲಾನುಭವಿಗಳ ಕುರಿತು

೮೯೨೧. ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ವಿದ್ಯುಚ್ಛಕ್ತಿ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ ಭಾಗ್ಯಜ್ಯೋತಿಯನ್ವಯ ಈ ತನಕ ಪ್ರಯೋಜನ ಪಡೆದ ಗ್ರಾಮಗಳ ಹಾಗೂ ಫಲಾನುಭವಿಗಳ ಸಂಖ್ಯೆ ಎಷ್ಟು ?

ಆ) ಅರ್ಹರಾದವರು ಭಾಗ್ಯಜ್ಯೋತಿಯನ್ವಯ ಅರ್ಜಿಯನ್ನು ಸಲ್ಲಿಸಿದ್ದರೆ ಯಾವ ಅವಧಿಯ ಮೇರೆಗೆ ಫಲಾನುಭವಿಗಳನ್ನು ಗುರುತಿಸಲಾಗುವುದು ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ ೩೧-೧೦-೮೯ರವರೆಗೆ ೬೨ ಗ್ರಾಮಗಳಲ್ಲಿ ೭೬೪ ಮನೆಗಳಿಗೆ ಭಾಗ್ಯಜ್ಯೋತಿಯನ್ವಯ ವಿದ್ಯುತ್ ಸರಬರಾಜು ಮಾಡಲಾಗಿದೆ.

ಆ) ಭಾಗ್ಯಜ್ಯೋತಿಯನ್ವಯ ವಿದ್ಯುದ್ದೀಪ ಒದಗಿಸಬೇಕಾದರೆ ಫಲಾನುಭವಿಯ ಮನೆಯು ಹತ್ತಿರ ವಿದ್ಯುತ್ ಲೈನ್ ಹೋಗಿದ್ದು ಮನೆಯು ಹತ್ತಿರ ಲೈನಿನ ಕಂಬದಿಂದ ೮ ಮೀಟರ್ ಅಂತರದ ಒಳಗಿರಬೇಕು. ಫಲಾನುಭವಿಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಗುರುತಿಸುತ್ತಾರೆ. ಇವರು ಸಮಾಜದಲ್ಲಿ ಆರ್ಥಿಕವಾಗಿ ಅತೀ ಹಿಂದುಳಿದವರಾಗಿರಬೇಕು. ಇವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಆದ್ಯತೆ ನೀಡಲಾಗುತ್ತದೆ.